**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 7/2023**

**ಚಾ.ಸಾ- 3**

**ಫ್ರಾ.ಸಾ - 1**

**ಸಾಕ್ಷಿಗೆ ದಿನಾಂಕ 22-05-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು ಃ ಅಮೃತ

ತಂದೆಯ ಹೆಸರು ಃ ಹಣಮಂತ ಚಿಗರಳ್ಳಿ

ವಯಸ್ಸು ಃ 30 ವರ್ಷ

ಉದ್ಯೋಗ ಃ ಕೂಲಿ

ವಾಸಸ್ಥಳ ಃ ಚಿಗರಳ್ಳಿ

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಆರೋಪಿ ಗೊತ್ತಿಲ್ಲ. ಚಾಸಾ 1 ಮತ್ತು 2 ಗೊತ್ತು. ಮೃತ ಶ್ರವಣಕುಮಾರ ಗೊತ್ತು. ಶ್ರವಣಕುಮಾರ ಅಪಘಾತದಲ್ಲಿ ಮೃತಪಟ್ಟಿರುತ್ತಾರೆಂದು ಕೇಳಿರುತ್ತೇನೆ. ಬೇರೆ ವಿಚಾರಗಳು ಗೊತ್ತಿಲ್ಲ. ದಿನಾಂಕ 12-09-2022 ರಂದು ಬೆಳಿಗ್ಗೆ 10-00 ರಿಂದ 11-00 ಗಂಟೆ ಸಮಯದಲ್ಲಿ ನಾನು ಜೇವರ್ಗಿ ಆಸ್ಪತ್ರೆಯ ಶವಾಗಾರದ ಹೊರಗೆ ಇದ್ದಾಗ ಪೊಲೀಸರು ಬಂದು ಸಹಿ ಮಾಡುವಂತೆ ಹೇಳಿದ ಕಾರಣ ಸಹಿ ಮಾಡಿರುತ್ತೇನೆ. ಪೊಲೀಸರು ಏನು ಮಾಡಿರುತ್ತಾರೆಂದು ಗೊತ್ತಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ಶವ ಪಂಚನಾಮೆಯಾಗಿದ್ದು ಸದರಿ ದಾಖಲೆ ಮೇಲಿರುವ ಸಹಿಯನ್ನು ಸಾಕ್ಷಿ ತನ್ನದೆಂದು ನೋಡಿ ಗುರುತಿಸಿದ ಸದರಿ ದಾಖಲೆಯನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1ರ ದಾಖಲೆಯನ್ನು ಪೊಲೀಸರು ಓದಿ ಹೇಳಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಶವದ

ಪಂಚನಾಮೆ ಮಾಡಿಲ್ಲ. ಸಾಕ್ಷಿಗೆ 4 ಛಾಯಾಚಿತ್ರಗಳನ್ನು ತೋರಿಸಲಾಗಿ ಅದರಲ್ಲಿ ತಾನಿರುವುದಾಗಿ ನೋಡಿ ಗುರುತಿಸಿದ್ದು ಸದರಿ ಛಾಯಾಚಿತ್ರಗಳನ್ನು ನಿಪಿ-2 ರಿಂದ 5 ಎಂದು ಗುರುತಿಸಲಾಯಿತು. ನಿಪಿ-2 ರಿಂದ 5 ರ ಛಾಯಾಚಿತ್ರಗಳನ್ನು ಯಾವ ವಿಚಾರವಾಗಿ ತೆಗೆದುಕೊಂಡಿರುತ್ತಾರೆಂದು ಗೊತ್ತಿಲ್ಲ

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>

ಪೊಲೀಸರು ಮೃತ ಶ್ರವಣಕುಮಾರರವರ ಶವದ ಶವ ಪಂಚನಾಮೆ ಮಾಡಿದ ನಂತರ ನನ್ನ ಸಹಿ ಪಡೆದುಕೊಂಡಿರುತ್ತಾರೆಂದರೆ ಗೊತ್ತಿಲ್ಲ. ನಿಪಿ-1 ರ ಪಂಚನಾಮೆಯನ್ನು ಪೊಲೀಸರು ನನ್ನ ಮತ್ತು ಚಾಸಾ-2 ದೇವಿಂದ್ರಪ್ಪರವರ ನಡುವೆ ಜರುಗಿಸಿರುತ್ತಾರೆಂದರೆ ಸರಿಯಲ್ಲ. ನಿಪಿ-2 ರಿಂದ 5 ರ ಛಾಯಾಚಿತ್ರಗಳನ್ನು ಶವ ಪಂಚನಾಮೆಯನ್ನು ಮಾಡುವಾಗ ತೆಗೆದಿರುತ್ತಾರೆಂದರೆ ಗೊತ್ತಿಲ್ಲ. ಪ್ರಕರಣದ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ</u>

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂಡಾಧಿಕಾರಿಗಳು, ಜೇವರಗಿ